ಕೂಡ ಕಾಣಬಹುದು. ಕೆಲವು ರೋಗಿಗಳಿಗೆ ಹಾಕಿಕೊಳ್ಳುವ ಬಟ್ಟೆಯೂ ಯಾತನಾಮಯ ಆಗಬಹುದು. ಸೋರಿಯಾಸಿಸ್ ಮಚ್ಚೆಯು ನಿದ್ರೆಗೆ ಸಮಸ್ಯೆ ಉಂಟು ಮಾಡುತ್ತದೆ. ಇದರಿಂದಾಗಿ ರೋಗಿಗೆ ಸುಸ್ತಾಗುತ್ತದೆ, ದಿನನಿತ್ಯದ ಕೆಲಸಗಳಲ್ಲಿ ಆಸಕ್ತಿ ಕಡಿಮೆ ಆಗುತ್ತದೆ. ಹಸ್ತದ ಮೇಲೆ ಅಥವಾ ಪಾದದ ಮೇಲೆ ಸೋರಿಯಾಸಿಸ್ ಇರುವವರಿಗೆ ಪ್ರತಿದಿನದ ಕೆಲಸಗಳಾದ ಅಡುಗೆ ಮಾಡುವುದು, ಟೈಪ್ ಮಾಡುವುದು, ವಾಹನ ಚಾಲನೆ ಮಾಡುವುದು ಅಥವಾ ನಡೆಯುವುದು ಕೂಡ ಕಷ್ಟವಾಗಿಬಿಡಬಹುದು. ಈ ಕಾಯಿಲೆ ಇರುವವರು ಹೃದಯದ ಸಮಸ್ಯೆಗಳು, ಕಿಡ್ನಿ ಸಮಸ್ಯೆಗಳಿಗೆ ತುತ್ತಾಗುವ ಸಾಧ್ಯತೆ ಹೆಚ್ಚು.

ಸರಿಸುಮಾರು ಶೇ.30ರಷ್ಟು ಮಂದಿ 'ಸೋರಿಯಾಟಿಕ್ ಸಂಧಿವಾತ' ಅನುಭವಿಸುತ್ತಾರೆ. ಇದು ಬಹಳ ನೋವು ಕೊಡುವಂಥದ್ದು ಹಾಗೂ ದಿನನಿತ್ಯದ ಕೆಲಸದ ಮೇಲೆ ನಕಾರಾತ್ಮಕ ಪರಿಣಾಮ ಬೀರಬಲ್ಲದು.

## ಮನಸ್ಸಿನ ಮೇಲಾಗುವ ಪರಿಣಾಮ

ಸೋರಿಯಾಸಿಸ್ ಕಾಯಿಲೆ ವ್ಯಕ್ತಿಯ ಮನಸ್ಸಿನ ಮೇಲೆಯೂ ಕೆಟ್ಟ ಪರಿಣಾಮ ಉಂಟು ಮಾಡಬಹುದು. ಈ ಕಾಯಿಲೆಯನ್ನು ಸಮಾಜವು ನೋಡುವ ರೀತಿಯು ನೋವು ಕೊಡುವಂಥದ್ದಾಗಿರುವ ಕಾರಣ ರೋಗಿಗಳು ಮುಜುಗರಕ್ಕೆ ಒಳಗಾಗಬಹುದು.

ಸೋರಿಯಾಸಿಸ್ ತೀವ್ರವಾಗಿ ಕಾಡುತ್ತಿರುವ ವ್ಯಕ್ತಿಗಳು ಖಿನ್ನತೆಗೆ ಒಳಗಾಗಬಹುದು ಹಾಗೂ ಅವರ ಮನಸ್ಸು ಕೆಟ್ಟ ಆಲೋಚನೆಯಿಂದ ಕೂಡಿರಬಹುದು ಎಂಬುದನ್ನು ಅಧ್ಯಯನಗಳು ಹೇಳಿವೆ.

ಸೋರಿಯಾಸಿಸ್‌ನ ಪರಿಣಾಮವನ್ನು ಗಂಭೀರ ಕಾಯಿಲೆಯಾದ ಕ್ಯಾನ್ಸರ್ ಅಥವಾ ಹೃದಯ ಸಂಬಂಧಿ ರೋಗಗಳಿಂದ ಉಂಟಾಗುವ ಪರಿಣಾಮಗಳ ಜೊತೆ ಹೋಲಿಸಬಹುದು. ಈ ಕುರಿತು ಇರುವ ತಪ್ಪು ತಿಳಿವಳಿಕೆಗಳನ್ನು ದೂರ ಮಾಡುವ ಅಗತ್ಯ ಇದೆ. ಈ ಕಾಯಿಲೆಯು ಅಂಟುರೋಗ ಅಲ್ಲ. ಒಬ್ಬರನ್ನು ಇನ್ನೊಬ್ಬರು ಮುಟ್ಟುವುದರಿಂದ ಇದು ಹರಡುವುದಿಲ್ಲ. ಸೋರಿಯಾಸಿಸ್ ಇರುವವರ ಜೊತೆ ಕುಳಿತು ಊಟ ಮಾಡುವುದರಿಂದ ಇದು ಹರಡುವುದಿಲ್ಲ. ಅಲ್ಲದೆ, ಸೋರಿಯಾಸಿಸ್ ಇರುವವರನ್ನು ಅಪ್ಪಿಕೊಳ್ಳುವುದರಿಂದ, ಅವರು ತೊಟ್ಟಿದ್ದ ಬಟ್ಟೆಯನ್ನು ತೊಡುವುದರಿಂದ ಕೂಡ ಇದು ಬರುವುದಿಲ್ಲ. ಹಾಗೆಯೇ ಈ ಕಾಯಿಲೆ ಇರುವವರು ಹಾಗೂ ಅವರ ಪ್ರೀತಿಪಾತ್ರರು ಕಾಯಿಲೆಗೆ ಲಭ್ಯವಿರುವ ಚಿಕಿತ್ಸೆಗಳ ಬಗ್ಗೆ ತಿಳಿದುಕೊಂಡಿರಬೇಕು.

## ಸೋರಿಯಾಸಿಸ್‌ಗೆ ಚಿಕಿತ್ಸೆ

ಸೋರಿಯಾಸಿಸ್ ಇರುವವರು ತಾವು ಪಡೆಯುವ ಚಿಕಿತ್ಸೆಯು ತಮ್ಮ ಚರ್ಮವನ್ನು ಮೊದಲಿನಂತೆಯೇ ಸಹಜವಾಗಿಸಬೇಕು ಎಂಬ ಬಯಸುತ್ತಾರೆ. ಅಥವಾ ದೀರ್ಘಾವಧಿಗೆ ತಮಗೆ ಕಾಯಿಲೆ ಉಪಶಮನದ ಪ್ರಯೋಜನ ಸಿಗಬೇಕು ಎಂದು ಬಯಸುತ್ತಾರೆ. ಇಂದು ಸೋರಿಯಾಸಿಸ್‌ಗೆ ಉತ್ತಮ ಚಿಕಿತ್ಸೆ ಲಭ್ಯವಿದೆ. ಉದಾಹರಣೆಗೆ ಬಯಾಲಾಜಿಕ್ಸ್. ಈ ಬಗೆಯ ಚಿಕಿತ್ಸೆಗಳು ಚರ್ಮದ ಮೇಲೆ ಯಾವುದೇ ಮಚ್ಚೆ, ಕಲೆ ಉಳಿಯದಂತೆ ಮಾಡುವ ಭರವಸೆ ನೀಡುತ್ತವೆ. ರೋಗಿಗಳಿಗೆ ಬೇರೆ ಕಾಯಿಲೆ ಬರುವುದರ ಅಪಾಯವನ್ನು ತಗ್ಗಿಸುತ್ತದೆ ಹಾಗೂ ರೋಗಿಯ ಜೀವನದ ಗುಣಮಟ್ಟವನ್ನು ಸುಧಾರಿಸುತ್ತದೆ.

ಅದೇನೇ ಇದ್ದರೂ, ಸೋರಿಯಾಸಿಸ್ ಎಷ್ಟು ಗಂಭೀರವಾಗಿದೆ ಹಾಗೂ ರೋಗಿಯ ಒಟ್ಟಾರೆ ಆರೋಗ್ಯ ಸ್ಥಿತಿ ಹೇಗಿದೆ ಎಂಬುದನ್ನು ಪರಿಶೀಲಿಸಿ ವೈದ್ಯರು ಸೂಕ್ತವಾದ ಚಿಕಿತ್ಸಾ ಕ್ರಮವನ್ನು ಸೂಚಿಸುತ್ತಾರೆ. ರೋಗಿಗಳು ಧೂಮಪಾನವನ್ನು ತ್ಯಜಿಸಿ, ಒತ್ತಡವನ್ನು ನಿಭಾಯಿಸಿಕೊಂಡು, ಆರೋಗ್ಯಕರವಾದ ಆಹಾರ ಕ್ರಮವನ್ನು ರೂಢಿಸಿಕೊಳ್ಳುವ ಕೆಲಸ ಮಾಡಬೇಕು

ಸೋರಿಯಾಸಿಸ್ ಜೊತೆಗಿನ ಜೀವನ ಸವಾಲಿನದ್ದಾಗಿರಬಹುದು. ಆದರೆ ಸೂಕ್ತ ಹಾಗೂ ನಿರಂತರ ಚಿಕಿತ್ಸೆ, ಜೀವನಶೈಲಿಯಲ್ಲಿ ತರುವ ಕೆಲವು ಬದಲಾವಣೆಗಳು ಈ ಕಾಯಿಲೆಯಿಂದ ಚೇತರಿಸಿಕೊಳ್ಳುವ ಪಯಣದಲ್ಲಿ ಮಹತ್ವದ ಬದಲಾವಣೆಗಳನ್ನು ತರಬಲ್ಲದು.

(ಲೇಖಕರು ಮಂಗಳೂರಿನ ಫಾದರ್ ಮುಲ್ಲರ್ ವೈದ್ಯಕೀಯ ಕಾಲೇಜಿನಲ್ಲಿ ಪ್ರಾಧ್ಯಾಪಕರು)

